ಪ್ರಕಟಣೆ :
ವೃಕ್ಷಲಕ್ಷ ಆಂದೋಲನ ಕರ್ನಾಟಕ,
ಅರಣ್ಯ ಇಲಾಖೆ ರಸ್ತೆ, ಸಾಗರ-577401
ಜುಲೈ - ಅಗಸ್ಟ್ 2014

# ಹಸಿರುಹೆಜ್ಜೆ

## ಪಶ್ಚಿಮಘಟ್ಟದ ವಾರ್ತಾ ಪತ್ರ

ಸಹಕಾರ :
ಪರಿಸರ ವಿಜ್ಞಾನ ಕೇಂದ್ರ
ಭಾರತೀಯ ವಿಜ್ಞಾನ ಸಂಸ್ಥೆ,
ಬೆಂಗಳೂರು.

# ಚಿಕ್ಕಮಗಳೂರು ಜಿಲ್ಲೆ ಅರಣ್ಯ ಪರಿಸ್ಥಿತಿ: ಅಧ್ಯಯನ ವರದಿ.

## ಮುಖ್ಯ ಅಂಶಗಳು:

ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರದ ಜೌಗು ಪ್ರದೇಶ, ಶಕ್ತಿ ಅಧ್ಯಯನ ವಿಭಾಗದ ವತಿಯಿಂದ 2013 –2014ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪರಿಸ್ಥಿತಿ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಹಿಂದಿನ ಸರ್ಕಾರದ ಪಶ್ಚಿಮಘಟ್ಟ ಕಾರ್ಯಪಡೆ ಸೂಚನೆ ಮೇರೆಗೆ ಚಿಕ್ಕಮಗಳೂರು ಅರಣ್ಯ ಇಲಾಖೆ ಈ ಅಧ್ಯಯನದ ಜವಾಬ್ದಾರಿಯನ್ನು ಭಾರತೀಯ ವಿಜ್ಞಾನ ಸಂಸ್ಥೆಯ ಡಾ॥ ಟಿ. ವಿ. ರಾಮಚಂದ್ರ, ತಂಡಕ್ಕೆ ವಹಿಸಿತ್ತು. ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳಾದ ಡಾ॥ ಟಿ. ವಿ. ರಾಮಚಂದ್ರ, ಡಾ॥ ಎಂ. ಡಿ. ಸುಭಾಸ್‌ಚಂದ್ರನ್, ಶ್ರೀ ಸುದರ್ಶನ ಭಟ್, ಶ್ರೀಕಾಂತ ನಾಯ್ಕ, ಜಿ.ಆರ್.ರಾವ್., ಸಿ. ಬಾಲಚಂದ್ರನ್, ಗೌರಿ ಕುಲಕರ್ಣಿ, ವಿಷ್ಣು ಮುಕ್ರಿ ಇವರುಗಳ ತಂಡ ಅಧ್ಯಯನ ನಡೆಸಿ 465 ಪುಟಗಳ ವರದಿಯನ್ನು ಜುಲೈ 2014 ರಲ್ಲಿ ನೀಡಿದೆ.
ಆಂಗ್ಲ ಭಾಷೆಯಲ್ಲಿರುವ ಅಧ್ಯಯನ ವರದಿಯ ಮುಖ್ಯ ಅಂಶಗಳನ್ನು ಸಂಗ್ರಹಿಸಿ ಕನ್ನಡಕ್ಕೆ ಅನುವಾದ ಮಾಡಲಾಗಿದೆ. ವೃಕ್ಷಲಕ್ಷ ಆಂದೋಲನದ ಹಸಿರು ಹೆಜ್ಜೆ ವಾರ್ತಾ ಪತ್ರದ ಮೂಲಕ ಸಂಕ್ಷಿಪ್ತ ಅಧ್ಯಯನ ವರದಿ ಪ್ರಕಟಿಸಲಾಗಿದೆ.

- **ಅಧ್ಯಯನದ ಅಧ್ಯಾಯಗಳು :** ಅರಣ್ಯ ಪರಿಸ್ಥಿತಿ ಅಧ್ಯಯನ ವರದಿಯು ಚಿಕ್ಕಮಗಳೂರು ಜಿಲ್ಲೆಯ ನದಿಗಳು, ಹವಾಮಾನ, ಸಸ್ಯವರ್ಗ, ವನ್ಯ ಜೀವಿ, ಅದಿರು, ಭೂ ಪರಿಸ್ಥಿತಿ, ಭೂಮಿ ಉಪಯೋಗ, ಅರಣ್ಯ ಅತಿಕ್ರಮಣ ಸ್ಥಿತಿ, ಕೀಟಗಳು, ಶೋಲಾ ಹುಲ್ಲುಗಾವಲು ಪರಿಸ್ಥಿತಿ, ವರ್ಕಿಂಗ್ ಪ್ಲಾನ್, ಮಾನವ ಪ್ರಾಣಿ ಸಂಘರ್ಷ ಮುಂತಾದ ವಿಷಯಗಳನ್ನು ಒಳಗೊಂಡಿದೆ.
- **ಪಶ್ಚಿಮ ಘಟ್ಟದ** ಸಸ್ಯ ವನ್ಯಜೀವಿ ವೈವಿಧ್ಯ ಜಾಗತಿಕವಾಗಿ ಪ್ರಸಿದ್ಧಿ ಮಹತ್ವ ಹೊಂದಿದೆ. ಜಗತ್ತಿನ ಅತಿ ಹೆಚ್ಚು ಜೀವ ವೈವಿಧ್ಯ ಹೊಂದಿದ 8 ಅತ್ಯಂತ ಅಪರೂಪದ ಸ್ಥಳಗಳಲ್ಲಿ ಸಹ್ಯಾದ್ರಿ ಒಂದಾಗಿದೆ. ಇಲ್ಲಿ ಹೂ ಬಿಡುವ 4000 ಜಾತಿಯ ಸಸ್ಯ ವರ್ಗ ಇದೆ. ಇವುಗಳಲ್ಲಿ ಮಧ್ಯ ಪಶ್ಚಿಮ ಘಟ್ಟ ವ್ಯಾಪ್ತಿಯಯಲ್ಲಿ ಶಿವಮೊಗ್ಗಾ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳು ಬರುತ್ತವೆ.
- **ವಿವಿಧ ರೀತಿಯ ಅರಣ್ಯಗಳು :** ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪ್ರದೇಶಗಳು ಮಲೆನಾಡಿನ ಪ್ರದೇಶ ಎಂದು ಕರೆಸಿಕೊಳ್ಳುತ್ತವೆ. ಆರ್ಥಿಕವಾಗಿ ಮತ್ತು ಪರಿಸರ ಸೇವೆಗಳಿಗೆ ಈ ಅರಣ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಜಿಲ್ಲೆಯಲ್ಲಿ ಎಲ್ಲ ರೀತಿಯ ಅರಣ್ಯ ಪ್ರದೇಶಗಳಿವೆ. ನಿತ್ಯ ಹರಿದ್ವರ್ಣ, ಕುರುಚಲು, ಭಾಗಶಃ ಹರಿದ್ವರ್ಣ, ಹಾಳಾಗುತ್ತಿರುವ ಅರಣ್ಯ ಹೀಗೆ ಹಲವು ಪರಿಸ್ಥಿತಿಯ ಅರಣ್ಯಗಳಿವೆ.
- **ನದಿಗಳ ಉಗಮ ಸ್ಥಾನ :** ತುಂಗಾ, ಭದ್ರಾ ನದಿಗಳ ಜೊತೆ ಹೇಮಾವತಿ, ಯಗಚಿ, ವೇದಾವತಿ, ನೇತ್ರಾವತಿ ನದಿಗಳ ಉಗಮ ಸ್ಥಾನ ಹೊಂದಿರುವ ಚಿಕ್ಕ ಮಗಳೂರು ಜಿಲ್ಲೆಯು ದಕ್ಷಿಣ ಭಾರತದ ಮಹತ್ವದ ಜಲಪಾತ್ರೆ ಎಂಬುದನ್ನು ವರದಿ ಎತ್ತಿ ಹೇಳಿದೆ.
- **ಪಾರಿಸಾರಿಕ ಮಹತ್ವ :** ಈ ಹಿನ್ನೆಲೆಯಲ್ಲಿ ಜಿಲ್ಲೆಯ ಅರಣ್ಯಗಳ ಉಳಿವಿನ ಕುರಿತು ನೀತಿ ನಿರೂಪಕರು ಎಲ್ಲಕ್ಕಿಂತ ಹೆಚ್ಚು ಆದ್ಯತೆ ನೀಡಬೇಕು ಎಂದು ವರದಿ ಅಭಿಪ್ರಾಯಪಟ್ಟಿದೆ. ಇಲ್ಲಿನ ಅಂತರ್ಜಲ, ಜೀವ ವೈವಿಧ್ಯ, ಹಳ್ಳ – ಹೊಳೆ, ಭೂಮಿ ಫಲವತ್ತತೆ, ನಿರಂತರ ನೀರು ಹರಿಯುವಿಕೆ, ವನ್ಯ ಜೀವಿಗಳ ಅವಾಸಸ್ಥಾನ, ಭೂ ಸವಕಳಿ ತಡೆ, ಮರಮಟ್ಟು, ಕಟ್ಟಿಗೆ, ಕೈಗಾರಿಕೆ ಕಚ್ಚಾವಸ್ತು, ಅರಣ್ಯ ಉಪ ಉತ್ಪನ್ನ, ಔಷಧೀ ಮೂಲಿಕೆಗಳ ಆಗರವಾದ ಈ ಅರಣ್ಯಗಳ ನಿರ್ವಹಣೆಗೆ ಬಹಳ ಮಹತ್ವ ನೀಡಬೇಕು.
- **ಅಪಾರ ವೈವಿಧ್ಯ :** ಜಿಲ್ಲೆಯಲ್ಲಿ 200 ಜಾತಿಯ ಅಪಾಯದ ಅಂಚಿನಲ್ಲಿರುವ ಸಸ್ಯ ವರ್ಗವಿದೆ. 400 ಜಾತಿಯ ಔಷಧೀ ಸಸ್ಯಗಳಿವೆ. ಕುದುರೆಮುಖದಲ್ಲಿ 2500 ಹೂ ಬಿಡುವ ಸಸ್ಯ ಜಾತಿಗಳಿವೆ. ಜಿಲ್ಲೆಯ ವಿವಿಧ ಜಾತಿಗಳ

ಗಿಡಗಳ ಪೈಕಿ 31% ರಷ್ಟು ವಿನಾಶದ ಅಂಚಿನ ಪಟ್ಟಿಯಲ್ಲಿ ಬರುತ್ತವೆ. ಇವುಗಳನ್ನು ಉಳಿಸಿಕೊಳ್ಳಲು ವಿಶೇಷ ಕಾಳಜಿ – ಪ್ರಯತ್ನ ಬೇಕು ಎಂದು ವರದಿ ಹೇಳುತ್ತದೆ.

- **ಜಿಲ್ಲೆಯ ಮಾಹಿತಿ :** 7201 ಚ.ಕೀ ವ್ಯಾಪ್ತಿ ಹೊಂದಿರುವ ಚಿಕ್ಕಮಗಳೂರು ಜಿಲ್ಲೆ ದಕ್ಷಿಣ ಮಧ್ಯ ಪಶ್ಚಿಮಘಟ್ಟ ಎಂದು ಕರೆಸಿಕೊಳ್ಳುತ್ತದೆ. ಇಲ್ಲಿನ ಜನಸಂಖ್ಯೆ 1137753, ಸರಾಸರಿ 158 ಜನರು ಒಂದು ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಒಟ್ಟೂ ಭೂ ವಿಸ್ತೀರ್ಣದ 39% ಅರಣ್ಯ ಪ್ರದೇಶವಿದೆ.
- **ಬೆಟ್ಟ ಗುಡ್ಡಗಳ ನಾಡು** ಇದು. ಅಪರೂಪದ ಮೇರು ಪರ್ವತವಿದೆ. ಮುಳ್ಳಯ್ಯನಗಿರಿ 1926 ಮೀ. ಎತ್ತರವಿದೆ. ಕುದುರೆಮುಖ 1895 ಮೀ ಎತ್ತರ ಇದೆ. ದತ್ತಪೀಠ (ಬಾಬಾಬುಡನಗಿರಿ) 1895 ಮೀ. ಎತ್ತರವಿದೆ. ಕಲ್ಲತ್ತಗಿರಿ 1877 ಮೀ. ಎತ್ತರವಿದೆ.
- 3773 ಮೀ. ನಷ್ಟು ಮಳೆ ವಾರ್ಷಿಕ ಸರಾಸರಿ ಇದೆ.
- ಇಡೀ ಪಶ್ಚಿಮ ಘಟ್ಟದ ಅತ್ಯುತ್ತಮ ಶೋಲಾ ಅರಣ್ಯ ಪ್ರದೇಶ ಚಿಕ್ಕಮಗಳೂರು ಜಿಲ್ಲೆಯಲ್ಲಿದೆ.
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶ್ಚಿಮಘಟ್ಟದಲ್ಲೇ ಅಪರೂಪದ್ದು ಎನ್ನುವ ಸಸ್ಯ ಜಾತಿಗಳಿವೆ. ಡಿಪ್ಲೊಕಾರ್ಪಸ್ ಇಂಡಿಕಸ್, ವೆಟೇರಿಯಾ ಇಂಡಿಕಾ, ಹೋಪಿಯಾ ಪೊಂಗಾ, ಹೋಪಿಯಾ ಕೆನರಾನ್ಸಿಸ್, ಪೋಸಿಲೋನರೋನ್, ಇಂಡಿಕಮ್ ಮುಂತಾದವು.
- ಸಿಸಿಮಮ್, ಲಿಟ್‌ಸೀ, ನಿಯೋಲಿಟ್‌ಸಿ ಮುಂತಾದವು ಶೋಲಾ ಕಾಡಿನ ವಿಶೇಷ ವೃಕ್ಷಗಳು.
- **ಶೃಂಗೇರಿ ಕೆರೆ ಕಟ್ಟೆ ಪ್ರದೇಶದಲ್ಲಿ ಎಸ್. ವಿಲ್ಲೋಸಾ ಎಂಬ ವೃಕ್ಷ ಜಾತಿ ಮೊದಲ ಬಾರಿ ಕಂಡು ಬಂದಿದೆ.**
- 130 ಪಕ್ಷಿಜಾತಿ ಬಾಬಾಬುಡನ್ ವಲಯದಲ್ಲಿದೆ.
- ಕುದುರೆಮುಖ ಪ್ರದೇಶದಲ್ಲಿ 70% ಆರ್ಕಿಡ್ ಜಾತಿಯ ಗಿಡಗಳಿವೆ. 750 ಜಾತಿಯ ಅಣಬೆ ಸಸ್ಯವರ್ಗ ಇದೆ.
- **60 ವರ್ಷ ನಂತರ ಬಾಬಾಬುಡನ್‌ನಲ್ಲಿ ಬ್ರಾಚಿಪ್ಟರಿಕ್ಸ (Brachy Pteryx) ಎಂಬ ಜಾಗತಿಕವಾಗಿ ವಿನಾಶದ ಅಂಚಿನಲ್ಲಿರುವ ಪಕ್ಷಿ ಕಂಡು ಬಂದಿದೆ.**
- ಜಿಲ್ಲೆಯಲ್ಲಿ 35 ಜಾತಿಯ ಕಪ್ಪೆಗಳನ್ನು ಗುರುತಿಸಲಾಗಿದೆ.
- ಜಿಲ್ಲೆಯಲ್ಲಿ 63 ಜಾತಿಯ ಚಿಟ್ಟೆಗಳನ್ನು ಗುರುತಿಸಲಾಗಿದೆ.
- ಜಿಲ್ಲೆಯಲ್ಲಿ 1990ರ ನಂತರ ಅತಿ ಹೆಚ್ಚು ಅರಣ್ಯ ನಾಶ ಆಗಿದೆ. ತರೀಕೆರೆ ತಾಲೂಕಿನಲ್ಲಿ ಅರಣ್ಯಗಳಲ್ಲಿ ಅತಿ ಹೆಚ್ಚು ಮಾನವ ಹಸ್ತಕ್ಷೇಪ ಇದೆ. ಜಿಲ್ಲೆಯಲ್ಲಿ 40 ವರ್ಷಗಳಲ್ಲಿ 15% ದಟ್ಟ ಅರಣ್ಯ ಕಣ್ಮರೆಯಾಗಿದೆ. ಕೊಪ್ಪ ಅರಣ್ಯ ವಿಭಾಗದಲ್ಲಿ 1976 ರಲ್ಲಿ 53% ಇದ್ದ ದಟ್ಟ ಅರಣ್ಯ 2009 ರಲ್ಲಿ 35% ಗೆ ಇಳಿದಿದೆ. ಭದ್ರಾವತಿ ಅರಣ್ಯ ವಿಭಾಗದ ತರೀಕೆರೆ ತಾಲೂಕಿನಲ್ಲಿ 1976 ರಲ್ಲಿನ 52% ದಟ್ಟ ಅರಣ್ಯ ಇತ್ತು. 2009 ರಲ್ಲಿ 34% ಆಗಿದೆ. ಚಿಕ್ಕಮಗಳೂರು ವಿಭಾಗದಲ್ಲಿ 1976ರಲ್ಲಿ 40% ದಟ್ಟ ಅರಣ್ಯ ಇತ್ತು. 2009 ರಲ್ಲಿ 24% ಗೆ ಇಳಿದಿದೆ.
- **ಚಿಕ್ಕಮಗಳೂರು ಅರಣ್ಯ ವಿಭಾಗದಲ್ಲಿ** 28047 ಹೆಕ್ಟೇರ್ ಸಿ ಮತ್ತು ಡಿ. ವರ್ಗದ ಭೂಮಿ ಇದೆ. ಇಲ್ಲಿ ನೈಸರ್ಗಿಕ ಅರಣ್ಯವಿದೆ. 4903 ಹೆಕ್ಟೇರ್ ಅರಣ್ಯ ಅತಿಕ್ರಮಣ ಭೂಮಿ ಇದೆ. ಚಿಕ್ಕಮಗಳೂರು ಅರಣ್ಯ ವಿಭಾಗ 25% ಅರಣ್ಯಗಳಿಂದ ಕೂಡಿದೆ.
- **ಕೊಪ್ಪ ಅರಣ್ಯ ವಿಭಾಗದಲ್ಲಿ** 63247 ಹೆಕ್ಟೇರ್ ಅರಣ್ಯ ಪ್ರದೇಶ ರೆವೆನ್ಯೂ ವ್ಯಾಪ್ತಿಯಲ್ಲಿದೆ. ಇವು ದಟ್ಟ ಅರಣ್ಯಗಳಾಗಿವೆ. 8014 ಹೆಕ್ಟೇರ್ ಅರಣ್ಯ ಪ್ರದೇಶ ಅತಿಕ್ರಮಣವಾಗಿದೆ.
- ಅತಿಕ್ರಮಣ ಪ್ರಮಾಣ ಬಹಳೇ ಜಾಸ್ತಿ ಇದೆ. ಇದರಿಂದಾಗುವ ಗಂಭೀರ ಪಾರಿಸಾರಿಕ ಪರಿಣಾಮಗಳು. ಅರಣ್ಯ ಪ್ರದೇಶ ಕಡಿಮೆ ಆಗಿದೆ, ಅರಣ್ಯ ಛಿದ್ರವಾಗಿದೆ, ಜೀವವೈವಿಧ್ಯತೆ ಕಡಿಮೆ ಆಗಿದೆ. ಸಸ್ಯ ಸಾಂದ್ರತೆ ಕಡಿಮೆ ಆಗಿದೆ, ಅರಣ್ಯ ಸ್ವರೂಪದಲ್ಲೇ ಬದಲಾವಣೆ ಆಗಿದೆ, ನೈಸರ್ಗಿಕ ಪುನರುತ್ಪತ್ತಿ ಕುಂಠಿತ ಆಗಿದೆ, ಹೊರಗಿನ ಸಸ್ಯಕಳೆಗಳು ತುಂಬಿಕೊಳ್ಳುತ್ತವೆ, ವನ್ಯ ಜೀವಿಗಳು ಅತಂತ್ರವಾಗುತ್ತವೆ. ಸಸ್ಯಜಾತಿ/ ಪ್ರಭೇದಗಳು ಕಾಣೆಯಾಗಿವೆ, ಅರಣ್ಯದಿಂದ ಬರುವ ಉತ್ಪನ್ನ ಕಡಿಮೆ ಆಗಿದೆ. ಅರಣ್ಯದ ಆರ್ಥಿಕ ಆದಾಯ ಕಡಿಮೆ ಆಗಿದೆ. ಜಲಮೂಲ, ಜಲಾನಯನಕ್ಕೆ ಬಹಳ ಹೊಡೆತ ಬಿದ್ದಿದೆ. ಅರಣ್ಯ ನಿರ್ವಹಣೆ ವೆಚ್ಚ ಅಧಿಕವಾಗುತ್ತದೆ.

## ಶಿಫಾರಸು – ನಿರ್ಣಯಗಳು :

- ಶೋಲಾ ಹುಲ್ಲುಗಾವಲು ಅರಣ್ಯಗಳು ಇಡೀ ಪಶ್ಚಿಮ ಘಟ್ಟಕ್ಕೆ ಅಪರೂಪದ್ದು ಎನಿಸಿಕೊಂಡಿದೆ. ಈ ಶೋಲಾ ಕಾಡುಗಳ ಉಳಿವಿಗೆ ನಿರ್ದಿಷ್ಟ ಕ್ರಮ ಬೇಕು. ಏಕಜಾತಿ ನೆಡುತೋಪು ನಿರ್ಮಾಣ ಶೋಲಾ ಹುಲ್ಲುಗಾವಲು ಪ್ರದೇಶಕ್ಕೆ ಸಾಧು ಅಲ್ಲ ಎಂದು ವರದಿ ಸ್ಪಷ್ಟವಾಗಿ ತಿಳಿಸಿದೆ.
- ಹೊಳೆ ಹಳ್ಳಗಳ ಅಂಚಿನ ಅರಣ್ಯ ಉಳಿಸಲು ರೈತರ – ವನವಾಸಿಗಳ ಪಾಲ್ಗೊಳ್ಳುವಿಕೆ ಹೆಚ್ಚಬೇಕು. ಗ್ರಾಮ ಅರಣ್ಯ ಸಮಿತಿಗಳನ್ನು ಬಲಪಡಿಸುವುದು ಅತ್ಯಂತ ಅವಶ್ಯ. ಚಿಕ್ಕಮಗಳೂರು ಜಿಲ್ಲೆಯ ಲಕ್ಷಾಂತರ ಜನ ರೈತರು, ವನವಾಸಿಗಳ ಬದುಕು ಈ ಅರಣ್ಯಗಳ ಉಳಿವಿನ ಮೇಲೆ ನಿಂತಿದೆ.
- ಪರ್ವತ ಪ್ರದೇಶಗಳಲ್ಲಿ ಹರಿದು ಬರುವ ಹಳ್ಳಗಳಿಗೆ ಅಡೆ ತಡೆ ಮಾಲಿನ್ಯ ಉಂಟುಮಾಡಬಾರದು. ಅತಿಯಾಗಿ ಕ್ರಿಮಿನಾಶಕ ಬಳಕೆ ಬಗ್ಗೆ ಎಚ್ಚರ ವಹಿಸಬೇಕು. ಸಮಗ್ರ ಅರಣ್ಯ ನಿರ್ವಹಣಾ ಯೋಜನೆ ರೂಪಿಸಲು ಸ್ಥಾನಿಕವಾಗಿ ಸಮಾಲೋಚನೆ ಅತ್ಯವಶ್ಯ. ಜೇನು ಸಂಕುಲ ಉಳಿವಿಗೆ ಅರಣ್ಯ ನಿರ್ವಹಣಾ ಯೋಜನೆಯಲ್ಲಿ ಸ್ಥಾನ ಬೇಕು.
- ರೈತರು, ಸ್ವಸಹಾಯ ಸಂಘಗಳ ಮೂಲಕ ಗಿಡಗಳ ವಿಕೇಂದ್ರೀಕೃತ ನರ್ಸರಿ ಮಾಡಲು ಅರಣ್ಯ ಇಲಾಖೆ ಸಹಾಯ ಮಾಡಬೇಕು. ಇಲ್ಲಿ ಅರಣ್ಯ ಹಳ್ಳ– ತೊರೆಗಳ ನಿರ್ವಹಣೆ ಮಾಡುವಲ್ಲಿ ಇಲ್ಲಿನ ವನವಾಸಿಗಳು, ಸ್ಥಾನಿಕ ರೈತರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ಥಾನಿಕರಿಗೆ ಕಾರ್ಬನ ಕ್ರೆಡಿಟ್ ಸಿಗುವಂತಾಗಬೇಕು.
- **ಅತ್ಯಂತ ಅಪರೂಪದ ಜೈವಿಕ ಸಂಪತ್ತು ಇರುವ ಪಶ್ಚಿಮಘಟ್ಟದ ಈ ಕಾಡುಗಳ ನಿರ್ವಹಣೆಗೆ ಸಮಗ್ರ ಪರಿಸರ ನಿರ್ವಹಣಾ ಯೋಜನೆಯ ಅವಶ್ಯಕತೆಯನ್ನು ಎತ್ತಿ ಹೇಳಲಾಗಿದೆ.**
- ನಿರಂತರವಾಗಿ ಇಡೀ ವರ್ಷ ನೀರಿನ ಹರಿವು ಇರಲು ಹಾಗೂ ಅಪಾರ ಜೀವ ವೈವಿಧ್ಯ ಉಳಿಯಲು ಸರಿಯಾದ ನಿರ್ವಹಣಾ ಯೋಜನೆ ಬಂದರೆ ಮಾತ್ರ (ಈಗಾಗಲೇ ಬಹಳಷ್ಟು ಅರಣ್ಯ ನಾಶ ಆಗಿದೆ) ಉಳಿದಿರುವ ನಿತ್ಯಹರಿದ್ವರ್ಣ, ಭಾಗಶಃ ಹಸಿರು ಅರಣ್ಯ ರಕ್ಷಣೆ ಸಾಧ್ಯ.
- ದಾಲ್ಚಿನ್ನಿ, ಹಾಲ್ಮಡ್ಡಿ, ಜೇನು, ಉಪ್ಪಾಗೆ, ಮುರುಗಲು, ಬಿದಿರು, ಬೆತ್ತ ಮುಂತಾದ ಅರಣ್ಯ ಉಪ ಉತ್ಪನ್ನಗಳನ್ನು ಹಾನಿಕಾರಕ ರೀತಿಯಲ್ಲಿ ಸಂಗ್ರಹ ಮಾಡುವ ಗುತ್ತಿಗೆ ನೀಡುವ ಪದ್ಧತಿಗಳನ್ನು ಕೈಬಿಡಬೇಕು. ಸ್ಥಾನಿಕ ಜನರಿಗೆ ಸುಸ್ಥಿರ ಉಪ ಅರಣ್ಯ ಉತ್ಪತ್ತಿ ಸಂಗ್ರಹ ಜವಾಬ್ದಾರಿ ನೀಡಬೇಕು.
- **ಅರಣ್ಯ ಉತ್ಪನ್ನ ಸಂಗ್ರಹ ಅವೈಜ್ಞಾನಿಕವಾಗಿದೆ** : ವಿನಾಶಕಾರೀ ಸಂಗ್ರಹ ಪದ್ಧತಿ ಕೈಬಿಡಬೇಕು. ಅಪರೂಪದ ವಿನಾಶದ ಅಂಚಿನ ಔಷಧೀ ಮೂಲಿಕೆಗಳ ಸಂಗ್ರಹ ನಿಲ್ಲಿಸಬೇಕು. ಹರಾಜು ಪದ್ಧತಿ ಕೈಬಿಡಬೇಕು. ಸುಸ್ಥಿರವಾದ ಸಂಗ್ರಹಕ್ಕೆ ಸಮಗ್ರ ಯೋಜನೆಯನ್ನು ವರ್ಕಿಂಗ್ ಪ್ಲ್ಯಾನ್‌ನಲ್ಲಿ ಸೇರಿಸಬೇಕು.
- **ಮಾನವ ವನ್ಯ ಜೀವಿ ಸಂಘರ್ಷ** ಜಿಲ್ಲೆಯ ಅರಣ್ಯ ಅಂಚಿನ ಪ್ರದೇಶಗಳಲ್ಲಿ ಮಿತಿಮೀರಿದೆ. ರೈತರ ಪ್ರಾಣ ಹಾಗೂ ಬೆಳೆ ರಕ್ಷಣೆ ದೊಡ್ಡ ಸಮಸ್ಯೆ ಎನಿಸಿದೆ. ಅದೆ ಹೊತ್ತಿಗೆ ವನ್ಯ ಜೀವಿಗಳ ರಕ್ಷಣೆ, ಪರಿಹಾರ, ಸೌರಬೇಲಿ ಹಾಗೂ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಕ್ರಮ ಇವೆಲ್ಲ ಜರೂರಾಗಿದೆ.
- ಬಯಲು ಭೂಮಿಯಲ್ಲಿ ಮಾತ್ರ ಮೈಸೂರು ಕಾಗದ ಕಾರ್ಖಾನೆಗೆ ನೆಡುತೋಪು ಬೆಳೆಸಲು ಅವಕಾಶ ನೀಡಬೇಕು. **ಕೈಗಾರಿಕಾ ನೆಡುತೋಪು** ನಿರ್ಮಾಣದಲ್ಲಿ ಬೆಂಕಿಹಾಕಿ ಸುಡುವುದು, ಬುಲ್ಡೋಜರ್ ಬಳಕೆ ನಿಲ್ಲಿಸಬೇಕು. ಜೀವ ವೈವಿಧ್ಯ ನಾಶ, ಮಣ್ಣು ಸವಕಳಿ ತಡೆಗೆ ಈ ಕ್ರಮ ಅವಶ್ಯ.
- **ಕಾಡಿನ ಬೆಂಕಿ** ಹೆಚ್ಚಾಗಲು ದಟ್ಟಾರಣ್ಯ ನಾಶವಾಗಿ ಕುರುಚಲು ಅರಣ್ಯವಾಗಿದ್ದು, ಅತಿಯಾದ ಮಾನವ ಹಸ್ತಕ್ಷೇಪವೇ ಇದಕ್ಕೆ ಕಾರಣ. ಕಾಡಿನ ಬೆಂಕಿಯಿಂದ ದೊಡ್ಡ ಮರಗಳಿಗೆ ಅನಾಹುತ ಆಗದಿದ್ದರೂ ಬಳ್ಳಿ, ಗಿಡಗಂಟಿ, ಚಿಕ್ಕ ಸಸ್ಯ ಸಮೂಹಗಳು, ಔಷಧೀ ಸಸ್ಯಗಳು ಪೂರ್ಣ ಸುಟ್ಟು ಹೋಗುತ್ತವೆ. ಜಿಲ್ಲೆಯ ಹಳ್ಳಿಗಳ ಅಂಚಿನ ಕಾಡುಗಳನ್ನು ಬೆಂಕಿಯಿಂದ ಸಂರಕ್ಷಣೆ ಮಾಡಲು ಜನರ ಸಹಕಾರ ಅತಿ ಮುಖ್ಯವಾಗಿದೆ.
- ಮಲೆನಾಡಿನ ಜನತೆ ಇಂಧನಕ್ಕಾಗಿ ಕಾಡಿನ ಮೇಲೆ ಅವಲಂಬಿಸುವದು ತಪ್ಪಬೇಕು. ಅದಕ್ಕಾಗಿ ಬಯೋಗ್ಯಾಸ್. ಸೌರಶಕ್ತಿ, ಸರಳ ಒಲೆ ಮುಂತಾದ **ಸುಧಾರಿತ ಇಂಧನ ಪದ್ಧತಿ** ಅಳವಡಿಕೆಗೆ ಪಶ್ಚಿಮಘಟ್ಟ ಕಾರ್ಯಪಡೆ, ಅರಣ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ ಕೈಗೊಂಡ ಯೋಜನೆಗಳಿಗೆ ಎಲ್ಲಿಲ್ಲದ ಮಹತ್ವ ನೀಡಬೇಕು.
- **ಅಕ್ರಮ ಕ್ವಾರಿಗಳು** ಹಾಗೂ **ಅಕ್ರಮ ಮರಳುಗಾರಿಕೆ** ನಿಲ್ಲದಿದ್ದರೆ ಅರಣ್ಯ, ನದೀ ಪಾತ್ರಗಳು ಜಿಲ್ಲೆಯಲ್ಲಿ ಬಹು ಶೋಷಣೆಗೆ ಒಳಗಾಗುತ್ತವೆ, ನಾಶವಾಗುತ್ತವೆ. ಚಿಕ್ಕ ಚಿಕ್ಕ ಮಲೆನಾಡ ಕೆರೆಗಳ ರಕ್ಷಣೆ–ಅಭಿವೃದ್ಧಿ ಅವಶ್ಯ. ಕೃಷಿಗೆ ಮತ್ತು ಕುಡಿಯುವ ನೀರಿಗೆ ಈ ಕೆರೆಗಳ ಉಳಿವು ಮುಖ್ಯ.
- ಕುದುರೆಮುಖ ಮತ್ತು ಕೆಮ್ಮಣ್ಣುಗುಂಡಿ ಬೆಟ್ಟಗಳ ಶಿಖರಗಳಿಗೆ ಭಾರಿ ಗಣಿಗಾರಿಕೆ ಅಪಾರ ಹಾನಿ ಮಾಡಿದೆ.

- ಹಳ್ಳ-ತೊರೆಗಳನ್ನು ಕಾಡಿನಿಂದ ತಿರುಗಿಸುವುದು, ನೀರಾವರಿಗೆ ಉಪಯೋಗಿಸುವದು ಇತ್ಯಾದಿಗಳಿಂದ ಸದಾ ಹರಿಯುವ ಹಳ್ಳಗಳು ಬತ್ತಲು ಕಾರಣವಾಗುತ್ತವೆ. ನದೀ ಪಾತ್ರದ ಅರಣ್ಯ ಕುಂಠಿತವಾಗುತ್ತದೆ.
- ನದಿ ಕಣಿವೆ ಕಾಡಿನ ಹಣ್ಣು ಜಾತಿಯ ತಳಿಗಳ ಬೃಹತ್ ಸಂಗ್ರಹಾಲಯವಾಗಿದೆ. ಮಾವು, ಹಲಸು, ಅಪ್ಪೆಮಿಡಿ, ಮೆಣಸು, ಮುರುಗಲು, ದಾಲ್ಚಿನ್ನಿ, ಲವಂಗ, ಶುಂಠಿ, ಅರಿಶಿಣ ಮುಂತಾದ ಅಪರೂಪದ ಸಾಂಪ್ರದಾಯಿಕ ತಳಿಗಳ ಉಳಿವಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು.
- ಪಶ್ಚಿಮ ಘಟ್ಟದ **ಅಳಿವಿನ ಅಂಚಿನ ಪ್ರಭೇದ**ಗಳನ್ನು ಉಳಿಸಲು ಗಂಭೀರ ಕಾರ್ಯಕ್ರಮಗಳು, ಆದ್ಯತೆ ಬೇಕೆ ಬೇಕು. ಇನ್ನಷ್ಟು ಅರಣ್ಯಗಳು ಛಿದ್ರವಾಗುವುದನ್ನು ತಡೆಗಟ್ಟಬೇಕು.
- ಅಪಾರ ಜಲಮೂಲಗಳಿರುವ ಈ **ಅರಣ್ಯಗಳ ನಿರ್ವಹಣೆಯ ನೀತಿ**ಗಳನ್ನು ಪುನರ್ ವಿಮರ್ಶೆ ಮಾಡಲೇಬೇಕು. ಯಾಕೆಂದರೆ ಇಲ್ಲಿನ ನದೀ ಕಣಿವೆಗಳು, ಹೊಳೆ ಹಳ್ಳಗಳು, ರಾಜ್ಯಕ್ಕೆ, ದಕ್ಷಿಣ ಭಾರತಕ್ಕೆ ಬಯಲು ನಾಡಿಗೆ ನೀರುಣಿಸುತ್ತವೆ.
- **ಅಭಯಾರಣ್ಯ**ಗಳ ಮಧ್ಯೆ ವನ್ಯ ಜೀವಿಗಳಿಗೆ ಸರಾಗವಾಗಿ ಓಡಾಡಲು ಸಂಪರ್ಕ ದಾರಿಗಳು, ಅವಶ್ಯ ಆಹಾರ, ನೀರಿನ ಸೌಲಭ್ಯ ಬೇಕು. ಹಣ್ಣು ಹಂಪಲು ಸಸ್ಯಗಳನ್ನು ಅಲ್ಲಲ್ಲಿ ನೆಡಬೇಕು. ಹುಲ್ಲುಗಾವಲು ನಾಶವಾಗಲು ಅವಕಾಶ ನೀಡಬಾರದು. ಕಾಡಿನಲ್ಲಿರುವ ಕೆರೆಗಳ ರಕ್ಷಣೆಗೆ ವ್ಯಾಪಕ ಕಾರ್ಯಕ್ರಮ ರೂಪಿಸಬೇಕು. ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಆನೆ ಹಾಗೂ ಹುಲಿ ಸೇರಿ ವನ್ಯ ಜೀವಿಗಳ ಸಂರಕ್ಷಿತ ಪ್ರದೇಶ, ಭದ್ರಾ ನದಿಗೆ ನಿರಂತರ ನೀರಿನ ಮೂಲ ಆಧಾರವಾಗಿದೆ.
- ಜಿಲ್ಲೆಯಲ್ಲಿ ಹೆಚ್ಚಿರುವ ಮಲೆನಾಡುಗಿಡ್ಡದಂತ ದೇಶೀ ಪಶ್ಚಿಮ ಘಟ್ಟದ ಜಾನುವಾರು ತಳಿಗಳ ರಕ್ಷಣೆಗೆ ಇನ್ನಷ್ಟು ಕ್ರಿಯಾಶೀಲ ಕ್ರಮಬೇಕು.
- ಆಣೆಕಟ್ಟುಗಳಿಗೆ ನೀರು ನಿರಂತರ ಬರಲು ನದೀ ಕಣಿವೆ ಅರಣ್ಯ ರಕ್ಷಣೆ ಅವಶ್ಯ.
- ಹಳ್ಳಗಳನ್ನು ತಿರುಗಿಸುವುದು ನದೀ ಅಂಚಿನ ಸಸ್ಯಗಳ ನಾಶಕ್ಕೆ ಕಾರಣವಾಗುತ್ತದೆ.
- ಜಾಗತಿಕವಾಗಿ ಹವಾಮಾನ ಬದಲಾವಣೆ ಕೃಷಿ ಮತ್ತು ಜೀವವೈವಿಧ್ಯತೆ ಮೇಲೆ ನೇರ ಪರಿಣಾಮ ಬೀರುತ್ತಿರುವ ಇಂದಿನ ಸಂದರ್ಭದಲ್ಲಿ ಜಿಲ್ಲೆಯ ಹಾಳಾದ ಅರಣ್ಯಗಳ ರಕ್ಷಣೆ ಅಭಿವೃದ್ಧಿಗೆ **ಜನಸಹಭಾಗಿತ್ವದ ನಿರ್ವಹಣೆ**ಗೆ ಆದ್ಯತೆ ನೀಡಬೇಕು.
- ಪಕ್ಕಾ ಅರಣ್ಯ ಭೂಮಿಗಳನ್ನು ಗುರುತಿಸಿ ಅವುಗಳಿಗೆ ರಕ್ಷಣಾ ಕವಚ ತೊಡಿಸುವ ಕಾರ್ಯ ವಲಯ ಮಟ್ಟದಲ್ಲಿ ನಡೆಯಬೇಕು.
- **ಅಂತರ್ಜಲ**ವನ್ನು ಕಾಯ್ದುಕೊಳ್ಳುವ ಬಹುಮುಖ್ಯ ಪಾತ್ರವಹಿಸುವ ಶೋಲಾ ಅರಣ್ಯಗಳನ್ನು ಲಘುವಾಗಿ ಪರಿಗಣಿಸಬಾರದು. **ಶೋಲಾ**ಗಳು ಎಲ್ಲೆಲ್ಲಿ ಇವೆ, ಅವುಗಳ ಸಂರಕ್ಷಣೆಗೆ ಪ್ರತ್ಯೇಕ ಕಾರ್ಯಕ್ರಮ ರೂಪಿಸಬೇಕು. ಬೆಟ್ಟ ಪರ್ವತಗಳಿಂದ ಹರಿಯುವ ನೀರಿನ ಜರಿ, ಹಳ್ಳಗಳಿಗೆ ಹಾನಿ ಮಾಡಬಾರದು.
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವ ಸಸ್ಯ, ವನ್ಯಜೀವಿ ಸ್ಥಳೀಯ ಪ್ರಭೇದಗಳು ಇಡೀ ಪಶ್ಚಿಮಘಟ್ಟದಲ್ಲಿ ಅಪರೂಪದ್ದು ಎನಿಸಿಕೊಂಡಿದೆ. ಇವುಗಳ ರಕ್ಷಣೆ ಮಾಡುವುದರಿಂದ ಸಮಗ್ರ ಜೀವವೈವಿಧ್ಯ ಸರಪಣಿ ಗಟ್ಟಿ ಆಗುತ್ತದೆ.
- **ಪ್ರಚಲಿತ ಜಾರಿಯಲ್ಲಿ ಇರುವ ಅರಣ್ಯ ನೆಡುತೋಪು ನಿರ್ಮಾಣ ಪದ್ಧತಿಯಲ್ಲಿ ಬದಲಾವಣೆ ಅತ್ಯವಶ್ಯ.** ಚಾಲ್ತಿ ನೆಡುತೋಪು ನಿರ್ಮಾಣ ನೀತಿಯಿಂದ ವೈವಿಧ್ಯತೆ ಕಡಿಮೆ ಆಗುತ್ತಿದೆ. ಏಕಜಾತಿ ನೆಡುತೋಪು ಅಂತರ್ಜಲದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯಾವುದೇ ಅರಣ್ಯ ಉಪಉತ್ಪನ್ನಗಳು ಲಭ್ಯವಾಗುವದಿಲ್ಲ. ಕಾಡಿನ ಜೇನು ಪ್ರಸಾರ ಆಗುವುದಿಲ್ಲ. ಸ್ಥಳೀಯ ಪ್ರಭೇದಗಳನ್ನು ಬೆಳೆಸುವ ಕಾರ್ಯಕ್ಕೆ ಎಲ್ಲಿಲ್ಲದ ಮಹತ್ವ ನೀಡಬೇಕು. ಕಾಡಿನ ಪ್ರಾಣಿಗಳಿಗೆ ಹಣ್ಣು ಹಂಪಲು ಸಿಗದ ಸ್ಥಿತಿ ತಪ್ಪಿಸಬೇಕು. ವಿವಿಧ ಜಾತಿಯ ಹುಲ್ಲುಗಳನ್ನು ಹುಲ್ಲುಗಾವಲು ಪ್ರದೇಶದಲ್ಲಿ ಬೆಳೆಸಲು ಕ್ರಮ ಅವಶ್ಯ.
- **ಔಷಧೀ ಮೂಲಿಕೆಗಳ** ಕಳ್ಳಸಾಗಾಣೆ, ವಾಣಿಜ್ಯ ಉಪಯೋಗ ತಪ್ಪಿಸಲು ಕಠಿಣ ಕ್ರಮಗಳು ತಕ್ಷಣ ಬೇಕಾಗಿವೆ.
- ಕೃಷಿ ಮತ್ತು ಅರಣ್ಯಅಭಿವೃದ್ಧಿಗೆ ಕಾಡಿನ ಜೇನುಸಂಕುಲ ಮುಖ್ಯ ಪಾತ್ರ ವಹಿಸುವದರಿಂದ ರೈತರು, ವನವಾಸಿಗಳಿಗೆ ಜೇನು ಸಾಕಾಣಿಕೆಗೆ ಪ್ರೋತ್ಸಾಹ ನೀಡಬೇಕು. ಜೇನು ಪಡೆ ಮರ ಹೆಚ್ಚಾಗಲು ವಿಶೇಷ ಪ್ರಯತ್ನ ಬೇಕು.
- **ಗ್ರಾಮ ಅರಣ್ಯ ಸಮಿತಿ**ಗಳನ್ನು ಅರಣ್ಯ ಉಪಉತ್ಪನ್ನ ಸಂಗ್ರಹ, ನಿರ್ವಹಣೆಯಲ್ಲಿ ತೊಡಗಿಸಬೇಕು. ಇದರಿಂದ ಹಳ್ಳಿಗರ ಆದಾಯ ಹೆಚ್ಚುತ್ತದೆ. ಅರಣ್ಯ ರಕ್ಷಣೆಗೆ ಜನರೇ ಮುಂದಾಗುತ್ತಾರೆ. ಭದ್ರಾ ಮತ್ತು ಕುದುರೆಮುಖ ಸಂರಕ್ಷಿತ ಪ್ರದೇಶಗಳಲ್ಲಿ ವನವಾಸಿಗಳ, ರೈತರ ಪರಿಸರ ಅಭಿವೃದ್ಧಿ ಸಮಿತಿ, ಜೀವವೈವಿಧ್ಯ ನಿರ್ವಹಣಾ ಸಮಿತಿ ಸ್ಥಾಪಿಸಬೇಕು.